**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಜೇವರ್ಗಿ .</u>**

# <u>ಸಿಸಿ ನಂ.01/2026</u>

**ಫಿರ್ಯಾದಿಃ** ಸರಕಾರದ ಪರವಾಗಿಃ ನೆಲೋಗಿ ಪೊಲೀಸ್ ಠಾಣೆ.

**-ಃಃ ವಿರುದ್ದ ಃಃ-**

**ಆರೋಪಿಃ** ರಾಮು ತಂದೆ ಪೊನ್ನು ರಾಠೋಡ
ವಃ 34 ವರ್ಷ, ಉಃ ಕೂಲಿ,
ಸಾಃ ಕೊಕಟನೂರ, ತಾಃ ಸಿಂಧಗಿ

## <u>ಆಪಾದನೆ</u>

ನಾನು ಶ್ರೀ ಕಾಶಿನಾಥ ವಿ. ಉಪ್ಪಾರ್, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಜೇವರ್ಗಿ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕ 05-09-2025 ರಂದು ಮದ್ಯಾಹ್ನ 03-00 ಗಂಟೆಯ ಸುಮಾರಿಗೆ ನೆಲೋಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಜೇವರ್ಗಿ-ಸಿಂಧಗಿ ರೋಡ ಮಂದೇವಾಲ ಬಸ್ಸ ನಿಲ್ದಾಣದ ದಾಟಿ ಮಡಿವಾಳಪ್ಪ ಮಾಲಿ ಪಾಟೀಲ ಅವರ ಹೊಲದ ಹತ್ತಿರ, ರಸ್ತೆಯ ಮೇಲೆ ಆರೋಪಿತನು ತನ್ನ ಮಾಟಾರ ಸೈಕಲ ಸಂ.ಕೆ-32/ಹೆಚ್ ಜಿ-9089 ನೆದರ ಹಿಂದೆ ಮೃತ ಸುಜಾತ ಗಂಡ ರಾಮು ರಾಠೋಡ ಅವರಿಗೆ ಕೂಡಿಸಿಕೊಂಡು ಮಂದೇವಾಲ ಗ್ರಾಮದಿಂದ ಕೂಕಟನೂರ ಗ್ರಾಮಕ್ಕೆ ಹೋಗುತ್ತಿದ್ದಾಗ ಆರೋಪಿತನು ಅತಿವೇಗವಾಗಿ ಹಾಗೂ ನಿಷ್ಕಾಳಜಿತನದಿಂದ ಚಾಲನೆ ಮುಂದೆ ಹೋಗುತ್ತಿದ್ದಾಗ ಒಮ್ಮೆಲೆ ನಾಯಿ ಅಡ್ಡ ಬಂದಾಗ ಆರೋಪಿತನು ಒಮ್ಮೇಲೆ ಬ್ರೇಕ ಹಾಕಿದ್ದರಿಂದ ಸದರಿ ಮೋಟಾರ ಸೈಕಲ ಸ್ಕಿಡ್ ಆಗಿ ರಸ್ತೆಯ ಅಪಘಾತ ಪಡಿಸಿರುತ್ತಿ, ಕಾರಣ, ನೀವು ಕಲಂ.281 (ಬಿ) ಎನ್ ಎಸ್ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಿರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ

ಆರೋಪಿತನು ತನ್ನ ಆರೋಪಿತನು ತನ್ನ ಮೋಟಾರ ಸೈಕಲ ಸಂ.ಕೆ-32/ಹೆಚ್ ಜಿ-9089 ನೇದರ ಹಿಂದೆ ಮೃತ ಸುಜಾತ ಗಂಡ ರಾಮು ರಾಠೋಡ ಸಾರ್ವಜನಿಕ ರಸ್ತೆಯ ಮೇಲೆ ಮಾನವನ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿ ಮಂದೇವಾಲ ಗ್ರಾಮದಿಂದ ಕೂಕಟನೂರ ಗ್ರಾಮಕ್ಕೆ ಹೋಗುತ್ತಿದ್ದಾಗ ಆರೋಪಿತನು ಅತಿವೇಗವಾಗಿ ಹಾಗೂ ನಿಷ್ಕಾಳಜಿತನದಿಂದ ಚಾಲನೆ ಮುಂದೆ ಹೋಗುತ್ತಿದ್ದಾಗ ಒಮ್ಮೆಲೆ ನಾಯಿ ಅಡ್ಡ ಬಂದಾಗ ಆರೋಪಿತನು ಒಮ್ಮೇಲೆ ಬ್ರೇಕ ಹಾಕಿ ಅಪಘಾತ ಪಡಿಸಿದ್ದರಿಂದ ಹಿಂದೆ ಕುಳಿತ ಸುಜಾತಾ ಇವಳಿಗೆ ಬಿಳಿದ್ದರಿಂದ ಅವಳಿಗೆ ಭಾರಿ ಗುಪ್ತಗಾಯಗಳನ್ನು ಮತ್ತು ತೀವ್ರಸ್ವರೂಪದ ರಕ್ತಗಾಯಗಳನ್ನು ಪಡಿಸಿದ್ದು, ಸಾಕ್ಷಿ ನಂ.1, 6 ರಿಂದ 8 ಇವರು ಸುಜಾತಾ ಇವಳಿಗೆ ಉಪಚಾರ ಕುರಿತು ಜೇವರ್ಗಿ ಆಸ್ಪತ್ರೆಗೆ ದಾಖಲೆ ಮಾಡಿದ್ದು, ನಂತರ ಹೆಚ್ಚಿನ  ಉಪಚಾರಕ್ಕಾಗಿ ಕಲಬುರ್ಗಿಯ ಜಿಲ್ಲಾ ಆಸ್ಪತ್ರೆ ಟ್ರಾಮಾ ಕೇರನಲ್ಲಿ ಸೇರಿಕೆ ಮಾಡಿರುತ್ತಾರೆ, ಸದರಿ ಆಸ್ಪತ್ರೆಯಲ್ಲಿ ಉಪಚಾರ ಪಡೆಯುತ್ತಾ, ಉಪಚಾರ ಫಲಕಾರಿಯಾಗದೆ ದಿನಾಂಕ 06-09-2025 ರಂದು ಬೆಳಗಿನ ಜಾವ 3-54 ಗಂಟೆಗೆ ಮೃತ ಪಟ್ಟಿರುತ್ತಾಳೆ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.106 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವೆ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನಾದ ನೀನು ವಾಹನ ಚಾಲನ ಪರವಾನಿಗೆ ಇಲ್ಲದೇ ನೀನು ನಿನ್ನ ಮೋಟಾರ ಸೈಕಲ ಸಂ.ಕೆ-32/ಹೆಚ್ ಜಿ-9089 ನೇದ್ದನ್ನು ಸಾರ್ವಜನಿಕ ರಸ್ತೆಯ ಮೇಲೆ ಯಾವುದೇ ವಾಹನ ಚಾಲನಾ ಪರವಾನಿಗೆ ಇಲ್ಲದೇ ಚಲಾಯಿಸಿದ್ದು, ಕಾರಣ ನೀನು ಮೋಟಾರು ವಾಹನ ಕಾಯ್ದೆ ಕಲಂ 181 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

## **ಆರೋಪಿ ಹೇಳಿಕೆಗಳು**

ಪ್ರಃ-1) ಮೇಲ್ಕಾಣಿಸಿದ ಆರೋಪಣೆಯನ್ನು ಓದಿ ಹೇಳಿ ತಿಳಿಸಿದ್ದನ್ನು ಅರ್ಥಮಡಿಕೊಂಡಿದ್ದೀರಾ?

ಉತ್ತರಃ- ಆ-

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೀರೊ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ- ಆ-

(ಆರೋಪಣೆಯನ್ನು ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ.)

ದಿನಾಂಕ 20-07-2026

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ. ಜೇವರ್ಗಿ.